ಶ್ರೀ ವಾಟಾಳ್ ನಾಗರಾಜ್.—ನಮ್ಮ ರಾಜ್ಯದಲ್ಲಿ ಇನ್ನು ಎಷ್ಟು ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ವಿದ್ಯಾ ಮಂತ್ರಿಗಳು ರಾಜ್ಯದಲ್ಲಿನ ವಿಶ್ವ ವಿದ್ಯಾನಿಲಯಗಳನ್ನು ಏಕರೀತಿಯ ಶಾಸನ ವ್ಯಾಪ್ತಿಗೆ ಒಳಪಡಿಸುವುದು ವಿಹಿತವಲ್ಲ ಎಂದು ಹೇಳಿದ್ದಾರೆ. ಹಾಗಾದರೆ ಯಾವ ಯಾವ ಕಾರಣಗಳಿಂದ ಅವುಗಳಿಗೆ ಏಕರೀತಿಯ ಕಾನೂನನ್ನು ಮಾಡುವುದಕ್ಕಾಗುವುದಿಲ್ಲ ಎಂಬುದನ್ನು ಹೇಳುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಒಂದೊಂದು ವಿಶ್ವವಿದ್ಯಾಲಯಕ್ಕೆ ಒಂದೊಂದು ರೀತಿಯ ಪದ್ಧತಿ ಮತ್ತು ಲಕ್ಷಣಗಳು ಇರುತ್ತವೆ. ಅದಕ್ಕನುಸಾರವಾಗಿ ಯೂನಿವರ್ಸಿಟಿಯ ಆಕ್ಟ್ ಇರುತ್ತದೆ. ಆದ್ದರಿಂದ ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ಅನ್ವಯವಾಗುವ ಹಾಗೆ ಏಕರೂಪತಾ ಕಾನೂನನ್ನು ಮಾಡುವುದು ಸಾಧುವಲ್ಲ.

ಶ್ರೀ ಕೆ. ಎಚ್. ಪಾಟೀಲ್.—ರಾಜ್ಯದಲ್ಲಿನ ವಿಶ್ವವಿದ್ಯಾನಿಲಯಗಳಲ್ಲಿ ಬೇರೆ ಬೇರೆ ರೀತಿಯ ಕಾಯಿದೆಗಳು ಇರುವುದರಿಂದ ಆ ವಿಶ್ವವಿದ್ಯಾನಿಲಯಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೂ, ನೌಕರ ವರ್ಗದವರಿಗೂ ಮತ್ತು ಇತರೆ ಜನಗಳಿಗೂ ಸರ್ಕಾರದಿಂದ ಡಿಸ್‌ಕ್ರಿಮಿನೇಟಿಂಗ್ ಟ್ರೀಟ್‌ಮೆಂಟ್ ಉಂಟಾಗುತ್ತದೆ. ಸರ್ಕಾರ ತನ್ನ ರಾಜಕೀಯ ಪ್ರಭಾವವನ್ನು ಬೆಳೆಸುವುದಕ್ಕೆ ಈ ರೀತಿ ನಾನಾ ಕಾಯಿದೆಗಳನ್ನು ಮಾಡಿದ್ದಾರೆಂಬುದು ನಿಜವೇ ?

ಶ್ರೀ ಕೆ. ವಿ. ಶಂಕರಗೌಡ.—ಅಲ್ಲಿ ಸರ್ಕಾರದವರಿಗೆ ವೆಸ್ಟೆಡ್ ಇಂಟರೆಸ್ಟ್ ಏನೂ ಇಲ್ಲ. ಅಯಾಯ ಸ್ಥಳದ ವಿದ್ಯಮಾನಗಳಿಗೆ ತಕ್ಕ ಹಾಗೆ ಕಾನೂನನ್ನು ಮಾಡಲಾಗಿದೆ. ಎಲ್ಲಾ ವಿಶ್ವ ವಿದ್ಯಾನಿಲಯಗಳಿಗೂ ಅನ್ವಯವಾಗುವ ಹಾಗೆ ಏಕರೂಪತಾ ಕಾನೂನನ್ನು ತರುವುದು ಸಾಧುವಲ್ಲ.

Sri D. B. KALMANKAR.—May I know what is the suggestion made by the Government of India to amend and modernise the University Act ?

Sri K. V. SHANKARA GOWDA.—They are directed mainly towards appointment of Vice-Chancellor and constitution of various committees and curricula to be adopted.

ಶ್ರೀ ಕೆ. ಎಂ. ತಮ್ಮಯ್ಯ.—ಸ್ವಾಮಿ, ಒಂದೊಂದು ವಿಶ್ವವಿದ್ಯಾನಿಲಯಗಳಲ್ಲಿ ಒಂದೊಂದು ತರಹ ಆಡಳಿತ ಇರುವುದರಿಂದ ಮತ್ತು ಒಂದೊಂದು ರೀತಿಯ ಆರ್ಡಿನೆನ್ಸ್ ಇರುವುದರಿಂದ ವಿದ್ಯಾರ್ಥಿಗಳಲ್ಲಿ ಅಸಿನು ಕಂಡುಬರುತ್ತಿದೆ. ಆದ್ದರಿಂದ ಎಲ್ಲಾ ವಿಶ್ವವಿದ್ಯಾನಿಲಯಗಳನ್ನು ಒಂದೇ ತರಹದ ಶಾಸನ ವ್ಯಾಪ್ತಿಗೆ ಒಳಪಡಿಸುವುದು ಒಳ್ಳೆಯದಲ್ಲವೇ ?

ಶ್ರೀ ಕೆ. ವಿ. ಶಂಕರಗೌಡ.—ಆರ್ಡಿನೆನ್ಸ್‌ಗೂ ಏಕರೀತಿಯ ಶಾಸನವನ್ನು ತರುವುದಕ್ಕೂ ಸಂಬಂಧವಿಲ್ಲ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಒಂದೊಂದು ವಿಶ್ವವಿದ್ಯಾನಿಲಯಗಳಲ್ಲಿ ಒಂದೊಂದು ರೀತಿಯ ಗ್ರೇಸ್ ಮಾರ್ಕ್ಸ್ ಕೊಡುತ್ತಿರುವುದರಿಂದ ವಿದ್ಯಾರ್ಥಿಗಳಲ್ಲಿ ಭಿನ್ನಾಭಿಪ್ರಾಯ ಬರುವುದಕ್ಕೆ ಕಾರಣವಾಗುತ್ತದೆ. ಆದ್ದರಿಂದ ರಾಜ್ಯದಲ್ಲಿನ ವಿಶ್ವವಿದ್ಯಾನಿಲಯಗಳನ್ನು ಏಕರೀತಿಯ ಶಾಸನ ವ್ಯಾಪ್ತಿಗೆ ಒಳಪಡಿಸುವುದು ವಿಹಿತವಲ್ಲವೆ ?

Sri K. V. SHANKARA GOWDA.—We have suggested to have uniform courses of study and that is being considered by the various universities. So far as making everything uniform, it is felt that it is not desirable.

Trade Agent for Mysore Government in London

102. Sri M. S. KRISHNAN (Malleswaram).—

Will the Minister for Industries, Information, and Publicity be pleased to state :—

(*a*) since how long the post of the Trade Agent for Mysore in London is existing ;

(*b*) whether the present Trade Agent for Mysore in London is to be replaced by another person ;

(*c*) the salaries, perquisites, etc., of the Trade Agent and the staff in London ;

(*d*) the annual expenses on this establishment in London since 1960 ;

(*e*) the pattern of staff working in the office of the Trade Agent in London :

(*f*) the income or any implied benefits to the State, if any, by having such a post in London ;

(*g*) whether there is any proposal to abolish the said post ?

Sri M. RAJASEKHARA MURTHY (Minister for Industries, Information, and Publicity).—

(*a*) The post of the Trade Agent for the Government of Mysore in London, formerly designated as Trade Commissioner has been in existence since 24th August 1929.

(*b*) No.

(*c*) The salary of the Trade Agent is the basic pay of the cadre to which he belongs plus £ 650 per annum as foreign allowance. Two Secretaries to the Trade Agent. Salary : £ 845 each per annum. 1 Office Messenger. Salary : £ 520 per annum.

(*d*) The annual expenses of this establishment in London since 1960 is £ 64,578.

(*e*) The Trade Agent is assisted by two secretaries whose salaries are £ 845 each per annum and an Office messenger at a salary of £ 520 per annum.

(*f*) The income is derived from the sale of Sandalwood Oil which during the financial year 1967-68 amounted to £ 526,259.

(*g*) No.

ಶ್ರೀ ಎಂ. ಎಸ್. ಕೃಷ್ಣನ್.—ನ್ಯಾಯ, ಲಂಡನ್‌ನಲ್ಲಿರುವ ಮೈಸೂರು ರಾಜ್ಯದ ವ್ಯಾಪಾರ ಪ್ರತಿನಿಧಿಯ ಕೆಲಸಕ್ಕೆ ಶ್ರೀಮಾನ್ ನಿಜಲಿಂಗಪ್ಪನವರ ಅಳಿಯಂದಿರನ್ನು ನೇಮಿಸಿದ್ದಿರೆಂದು ತಿಳಿದು ಬಂದಿದೆ. ಅದಕ್ಕೆ ಪ್ರಬಲವಾದ ಕಾರಣವೇನು ? ಬೇರೆ ಇನ್ಯಾವ ಸರಿಯಾದವರು ಆ ಹುದ್ದೆಗೆ ಸಿಗಲಿಲ್ಲವೆ ? ಕಾಂಗ್ರೆಸ್‌ನವರೇ ಇರಬೇಕೆಂದು ಅರ್ಥವೇ ?

Sri M. RAJASEKHARA MURTHY.—His relationship with Sri Nijalingappa is quite irrelevant. He is the best qualified person and so we have appointed him.

ಶ್ರೀ ಎಂ. ಎಸ್. ಕೃಷ್ಣನ್.—ಈ ಹುದ್ದೆಯನ್ನು ರದ್ದುಮಾಡಬೇಕು, ಆ ಹುದ್ದೆ ಇರಕೂಡದು, ಈ ಹುದ್ದೆ ಇರುವುದು ಘಟನಾವಳಿಗೆ ವಿರುದ್ಧವಾಗುತ್ತದೆ ಎಂದು ಪಾರ್ಲಮೆಂಟಿನಲ್ಲಿ ಅನೇಕರು ವಿರೋಧ ವ್ಯಕ್ತಪಡಿಸಿದರು ಎಂಬುದು ತಮಗೆ ಗೊತ್ತಿದೆಯೇ ?

Sri M. RAJASEKHARA MURTHY.—I do not want to offer any comments on the deliberations of the Parliament. But the Government of India has permitted the continuance of the post of the Trade Agent.

Sri H. N. NANJE GOWDA.—What was the annual expenditure before 1960 ?

Sri M. RAJASEKHARA MURTHY.—In 1959-60 it was about, £ 62,000 ; In 1960-61 it was about £ 66,750.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವಾರ್ಷಿಕ ವೆಚ್ಚ 64,578 ಪೌಂಡುಗಳು, 1967-68 ನೇ ಸಾಲಿನ ಆರ್ಥಿಕ ವರ್ಷಕ್ಕೆ 526,259 ಪೌಂಡುಗಳು ಆದಾಯ ಬಂದಿದೆ ಎಂದು ಹೇಳಿದ್ದೀರಿ. ಸರ್ಕಾರಕ್ಕೆ ಇದು ರಾಧ ಎಂದು ಕಂಡುಬಂದಿದೆಯೇ ? ಈ ಪದ್ಧತಿಯನ್ನು ರದ್ದುಪಡಿಸಿ ಕಮೀಷನ್ ಮೇರೆ ಏಜೆಂಟರನ್ನು ನೇಮಕ ಮಾಡುವುದಕ್ಕೆ ಸಾಧ್ಯವಿಲ್ಲವೇ ?

Sri M. RAJASEKHARA MURTHY.—That is the total for 8 years.

Sri K. H. PATIL.—The hon'ble Minister stated that the man selected was the best qualified person. May I know what were are the qualifications that were under the consideration of the Government before the person was appointed and may I know whether there was no other person who was more qualified than him and he was appointed because he is the son-in-law of a renowned Congressman ?

Sri M. RAJASEKHARA MURTHY.—The relationship of an officer with a great personality should be neither favourable nor disadvantageous to him. The Government considered that he is the best officer and so they appointed him as Trade Agent. He has secured First Class throughout his academic career ; he is First Class in the Intermediate ; first class in B. A. and he is First Class First Rank in M. A. He has secured Gold Medals throughout. Apart from that he was selected for Commonwealth Scholarship by the Union Government and he has been a senior I. A. S. officer. He has also got knowledge about trade and commerce and the industries of the State. Taking all these factors into consideration, the Government have appointed him as Trade Agent in London.

ಶ್ರೀ ಕೆ. ಹೆಚ್. ರಂಗನಾಥ್.—ಈಗ ಲಂಡನ್ನಿಲ್ಲಿರುವ ಟ್ರೇಡ್ ಏಜೆಂಟರಾಗಿ ಮೈಸೂರಿನ ಪರವಾಗಿ ಒಬ್ಬರು ಅಧಿಕಾರಿಗಳನ್ನು ನೇಮಕಮಾಡಿ ಅದಕ್ಕೆ ಖರ್ಚು ಮಾಡುವುದಕ್ಕೆ ಬದಲಾಗಿ ಲಂಡನ್ನಿನಲ್ಲಿರುವ ಹೈ ಕಮಿಷನ್ ಆಫೀಸಿನವರಿಗೇ ಈ ವ್ಯವಸ್ಥೆಯನ್ನು ವಹಿಸಿ ಅವರಿಂದ ಇಲ್ಲಿನ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೇ ಮತ್ತು ಈ ದೃಷ್ಟಿಯಿಂದ ಈ ಪೋಸ್ಟ್‌ನ್ನು ವಜಾ ಮಾಡುವುದಕ್ಕೆ ಸರಕಾರ ಪ್ರಯತ್ನ ಮಾಡುತ್ತದೆಯೇ ?

Sri M. RAJASEKHARA MURTHY.—The work of the State Government can be carried on more vigorously by having our own Trade Agent. Formerly this Trade Agent was appointed only to sell sandal wood oil. Subsequently, his activities have been diversified. He

has been circulating tenders for so many purchases by the various industrial concerns of the State Government and he has also been circulating enquiries with regard to Government Corporations and several Mysore State Companies. He is responsible to make purchases there and book cargoes to our country. There are so many other miscellaneous activities. All these things could not be looked into by the Indian High Commission.

Documentary Film about Scholars and Poets

130. Sri H. B. JWALANAIAH (Hassan).—

Will the Minister for Industries, Information and Publicity be pleased to state :—

whether there is any proposal to produce a Documentary Film about our great Scholars and Poets like Dr. K. V. Puttappa, Sri Bendre, Dr. D. V. Gundappa, Dr. Shivaram Karanth, Sri A. N. Krishna Rao and others for the sake of future generation ?

Sri M. RAJASEKHARA MURTHY (Minister for Industries, Information and Publicity).—

No.

ಶ್ರೀ ಹೆಚ್. ಬಿ. ಜ್ವಾಲನಯ್ಯ.—ಸರಕಾರ ಬೇಕಾದಷ್ಟು ಅವಶ್ಯಕತೆ ಇಲ್ಲದೆ ಇರುವ ಕಡೆಗೆ ದುಡ್ಡು ಪೆಚ್ಚು ಮಾಡಿ ಪೋಲು ಮಾಡುತ್ತಿದೆ. ಇದಕ್ಕೆ ಬದಲಾಗಿ ನಮ್ಮ ರಾಷ್ಟ್ರದಲ್ಲಿರುವ ಉನ್ನತ ವ್ಯಕ್ತಿಗಳಾಗಿರುವ ಡಾ. ಕೆ. ವಿ. ಪುಟ್ಟಪ್ಪ, ಬೇಂದ್ರೆ ಮುಂತಾದ ದೊಡ್ಡ ದೊಡ್ಡ ವ್ಯಕ್ತಿಗಳ ಜೀವನ ಚರಿತ್ರೆಗಳನ್ನು ದೇಶದ ಜನತೆಗೆ ಪರಿಚಯ ಮಾಡಿಕೊಡುವುದು ಸರಕಾರದ ಆದ್ಯ ಕರ್ತವ್ಯವಲ್ಲವೇ ?

ಶ್ರೀ ಎಂ. ರಾಜಶೇಖರ ಮೂರ್ತಿ.—ಅವಶ್ಯಕತೆ ಇಲ್ಲದ ಕೆಲಸಗಳಿಗೆ ಸರಕಾರ ಹಣ ಪೋಲು ಮಾಡುತ್ತಿದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಆದರೆ ಮಾನ್ಯ ಸದಸ್ಯರು ಹೇಳಿದ ಇನ್ನೊಂದು ಸಲಹೆ ಉತ್ತಮವಾದುದು. ಇದರ ಬಗ್ಗೆ ಸರಕಾರ ಆಲೋಚನೆ ಮಾಡುತ್ತಿದೆ.

Issue of sale chits for sale of Cattles

136. Sri SADASHIVAPPA PATIL (Deodurg).—

Will the Minister of State for Veterinary Services, Animal Husbandry and Dairy Development be pleased to state :—

(*a*) whether the Government is aware that the Village panchayats and Police Patels are issuing sale chits for sale of cattle in Villages;

(*b*) if so, the provision of law under which they are authorised to issue such sale chits ?